ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಅಲ್ಲಿಯ ಆಡಳಿತವರ್ಗದವರು ಹೈಕೋರ್ಟಿಗೆ ಹೋಗಿ ರಿಟ್ ಅರ್ಜಿಯನ್ನು ದಾಖಲೆ ಮಾಡಿ ಸರ್ಕಾರ ತೆಗೆದುಕೊಳ್ಳುತ್ತಿರತಕ್ಕಂಥ ಕ್ರಮಕ್ಕೆ ಏನಾದರೂ ತಡೆಯಾಜ್ಞೆ ತೆಗೆದುಕೊಂಡಿದ್ದರೆ, ಅಡ್ವೊಕೇಟ್ ಜನರಲ್ ರವರನ್ನು ಕಳುಹಿಸಿ ಅದರ ಸಂಪೂರ್ಣವಾದ ಮಾಹಿತಿಯನ್ನು ತರಿಸಿ, ಅಂಥ ಸಂಸ್ಥೆಗಳ ಮಾನ್ಯತೆಯನ್ನು ಪರ್ಮನೆಂಟ್ ಆಗಿ ರದ್ದುಮಾಡಲಿಕ್ಕೆ ಇರತಕ್ಕಂಥದ್ದಕ್ಕೆ ಕ್ರಮವನ್ನು ಸರ್ಕಾರದ ವತಿಯಿಂದ ಕೈಗೊಳ್ಳುತ್ತೇವೆ ಎಂದು ಈ ಸದನಕ್ಕೆ ಆಶ್ವಾಸನೆಯನ್ನು ಕೊಡುತ್ತೇನೆ.

ಹೊಸ ಪಡಿತರ ಚೀಟಿಗೆ ಭಾವಚಿತ್ರ ಹಾಗೂ ಇತರ ಮಾಹಿತಿಗಳನ್ನು ನೀಡಲು ಕಾಲಾವಕಾಶ.

ಶ್ರೀ ಕುಂಬೆ ಸುಂದರರಾವ್ (ಸುರತ್ಕಲ್) : ಮಾನ್ಯ ಉಪಾಧ್ಯಕ್ಷರೆ, ಕಳೆದ ಬಾರಿ ಈ ಸದನದ ಕೊನೆಯ ದಿವಸ ಹೊಸ ಪಡಿತರ ಚೀಟಿಯನ್ನು ಪಡೆಯಲು ಅದಕ್ಕೆ ಬೇಕಾದ ಫೋಟೋ ಮತ್ತಿತರ ಮಾಹಿತಿಗಳನ್ನು ಪುನಃ ಹೊಂದಿಸಿಕೊಳ್ಳುವುದಕ್ಕೆ ಜನರಿಗೆ ಕಷ್ಟವಾಗುವುದರಿಂದ ಸ್ವಲ್ಪ ಹೆಚ್ಚಿಗೆ ಕಾಲಾವಕಾಶ ಕೊಡಬೇಕು ಎಂದು ಪ್ರಸ್ತಾಪ ಮಾಡಿದ್ದೆ. ಹೊಸ ಪಡಿತರ ಚೀಟಿ ಪಡೆಯಲು ಕಳೆದ ತಿಂಗಳ 4ನೇ ತಾರೀಖು ಕೊನೆಯ ದಿವಸವಾಗಿತ್ತು. ಎಷ್ಟು ಕಾಲಾವಕಾಶ ಬೇಕು ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಕೇಳಿದಾಗ 2 ತಿಂಗಳಾದರೂ ಕಾಲಾವಕಾಶ ಬೇಕು ಎಂದು ಕೇಳಿದ್ದೆ. 2 ತಿಂಗಳ ಕಾಲಾವಕಾಶ ಬೇಕು ಎಂದು ಕೇಳಿದಾಗ ಈಗ ಸದನದಲ್ಲಿ ಮಾನ್ಯ ಆಹಾರ ಇಲಾಖೆಯ ಸಚಿವರು ಹೇಗೆ ಇಲ್ಲವೋ ಹಾಗೆಯೇ ಆ ದಿನವೂ ಸಹ ಅವರು ಸದನದಲ್ಲಿ ಇರಲಿಲ್ಲ. ನಾನು ಕಾಲಾವಕಾಶ ಕೇಳಿದ್ದನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಸರ್ಕಾರದ ಪರವಾಗಿ ಒಪ್ಪಿಕೊಂಡಿದ್ದರು. 2 ತಿಂಗಳ ಅವಕಾಶ ಕೇಳುತ್ತಿದ್ದೀರಿ, ನೀವು ಆ ಕಾಯಿದೆಯನ್ನು ಬದಲಾಯಿಸಬೇಕು ಎಂದು ಹೇಳುತ್ತಿಲ್ಲ, ನಿಮ್ಮ ಸಲಹೆಯನ್ನು ಒಪ್ಪಬಹುದು ಸುಂದರರಾಯರೇ ಎಂದು ಹೇಳಿದರು. ನನ್ನ ಈ ಮಾತು ಏನು ಇದೆ ಅದು ನಮ್ಮ ಜಿಲ್ಲೆಯಲ್ಲಿ ನನ್ನ ಹೆಸರಿನ ಸಮೇತ ಪತ್ರಿಕೆಯಲ್ಲಿ ಪ್ರಚಾರವಾಯಿತು. ಆದರೆ ಈ ಸರ್ಕಾರದ ಒಪ್ಪಿಗೆ ಏನು ಇದೆ ಅಲ್ಲಿನ ಅಧಿಕಾರಿಗಳಿಗೆ ತಲುಪಲಿಲ್ಲ. ಅದರ ಪರಿಣಾಮವಾಗಿ 2 ತಿಂಗಳ ಕಾಲಾವಕಾಶವನ್ನು ಕೊಡುವುದನ್ನು ಸರ್ಕಾರ ಸದನದಲ್ಲಿ ಒಪ್ಪಿದೆ ಎನ್ನುವುದು ನಾನು ಅಲ್ಲಿಯ ಜಿಲ್ಲಾಧಿಕಾರಿಗಳಿಗೆ ತಿಳಿಸಿದೆ. ಆದರೂ ಸಹ ರೇಷನ್ ಅಂಗಡಿಗಳಲ್ಲಿ ಈಗ ಯಾರಿಗೂ ರೇಷನ್ ಕೊಡುತ್ತಿಲ್ಲ. ಮಾನ್ಯ ಉಸ್ತುವಾರಿ ಸಚಿವರು ನಮ್ಮ ಕ್ಷೇತ್ರಕ್ಕೆ ಬಂದಿದ್ದರು. ದಯಮಾಡಿ ಮಾನ್ಯ ಉಸ್ತುವಾರಿ ಸಚಿವರು ಇದನ್ನು ಗಮನಿಸಬೇಕು. ನಮ್ಮಲ್ಲಿಯ ರೇಷನ್‌ದಾರರಿಗೆ, ಜನರಿಗೆ ಈ ರೀತಿ ತೊಂದರೆ ಆಗಿದೆ ಎಂದು ಮಾನ್ಯ ಉಸ್ತುವಾರಿ ಸಚಿವರಿಗೆ ಹೇಳಿದೆ. ಆಗ ನಾನು ಡಿ.ಸಿ.ಯವರಿಗೆ ತಿಳಿಸುತ್ತೇನೆ, ನೀವು ಯೋಚನೆ ಮಾಡಬೇಡಿ ಸುಂದರಾಯರೇ' ಎಂದು ಅವರು ಹೇಳಿದರು. ಆದರೆ ಡಿ.ಸಿ.ಯವರು ಅವರಿಗೆ ಸಿಗಲಿಲ್ಲ. ಡಿ.ಸಿ.ಯವರಿಗೆ ತಿಳಿಸಿ ಎಂದು ಅವರು ಕಾರ್ಪೋರೇಷನ್ ಕಮಿಷನ್‌ರವರಿಗೆ ಹೇಳಿದರು. ಇಷ್ಟು ಆದಮೇಲೂ ಇವತ್ತೂ ಸಹ ಸರ್ಕಾರದ ಆಶ್ವಾಸನೆ ಏನು ಇದೆ ಅದನ್ನು ರೇಷನ್ ಅಧಿಕಾರಿಗಳು ಅನುಸರಿಸುತ್ತಿಲ್ಲ. ಫೋಟೋ ಮತ್ತು ಇತರ ಮಾಹಿತಿಗಳನ್ನು

ಕೊಡುವುದಕ್ಕೆ 2 ತಿಂಗಳ ಕಾಲಾವಕಾಶ ಬೇಕು ಎನ್ನುವುದು ಜನರ ಬೇಡಿಕೆಯಾಗಿರುತ್ತದೆ. ಈಗ ಸರ್ಕಾರ ತಪ್ಪಿತಸ್ಥನಾಗಿ ಜನರ ಕೈಗೆ ಸಿಗುತ್ತಿಲ್ಲ, ಪತ್ರಿಕೆಯಲ್ಲಿ ನನ್ನ ಹೆಸರು ಬಂದಿದ್ದರಿಂದ ನಾನು ಜನರ ಕೈಗೆ ತಪ್ಪಿತಸ್ಥನಾಗಿ ಸಿಗುತ್ತಿದ್ದೇನೆ. ಆದ್ದರಿಂದ, ಒಬ್ಬ ಮಂತ್ರಿಗಳ ಪರವಾಗಿ ಇನ್ನೊಬ್ಬ ಮಂತ್ರಿಗಳು ಉತ್ತರ ಕೊಟ್ಟರೆ ಅದು ಸಿಂಧು ಅಲ್ಲವೇ ? ಸಿಂಧು ಅಲ್ಲ ಎನ್ನುವುದಾದರೆ ಅದನ್ನು ಈ ಸದನದಲ್ಲಿ ಹೇಳಿ. ಯಾವ ಮಂತ್ರಿ ಹೇಳಿದರೂ ಅದನ್ನು ಸರ್ಕಾರವೇ ಒಪ್ಪಿದೆ ಎನ್ನುವುದಾದರೆ ಹಾಗೆಂದು ನನಗೆ ಉತ್ತರ ಕೊಡಿ. ನಮ್ಮಲ್ಲಿಗೆ ಒಂದು ಸಾಕ್ಷ್ಯ ಆದರೂ ಕಳುಹಿಸಿಕೊಡಿ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಕಳೆದ ಅಧಿವೇಶನದಲ್ಲಿ ಈ ವಿಷಯ ಚರ್ಚೆಗೆ ಬಂದಂಥ ಸಂದರ್ಭದಲ್ಲಿ ಮಾನ್ಯ ಮಿತ್ರರು ಹೇಳಿದ ಹಾಗೆ ಉತ್ತರ ಕೊಡುವಾಗ ಸಂಬಂಧಪಟ್ಟ ಮಂತ್ರಿಗಳು ಇರಲಿಲ್ಲ. ಇದಕ್ಕೆ ನಮ್ಮ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಉತ್ತರ ಕೊಡುವಾಗ ನಾನು ಸದನದಲ್ಲಿದ್ದೆ. ಸರ್ಕಾರದ ವತಿಯಿಂದ ಯಾವುದೇ ಒಂದು ಆಶ್ವಾಸನೆಯನ್ನು ಕೊಟ್ಟರೆ ಅದು ಸರ್ಕಾರದ ವತಿಯಿಂದ ಕೊಡುತ್ತಿರತಕ್ಕಂಥ ಆಶ್ವಾಸನೆ ಎನ್ನುವುದು ಅದು ಖಾತರಿಯಾಗಿರುತ್ತದೆ. ಬಹುಶಃ ಆ ಮಂತ್ರಿ ಕೊಟ್ಟಿರತಕ್ಕಂಥ ಆಶ್ವಾಸನೆ ಈ ಮಂತ್ರಿಗೆ ಲಗತ್ತು ಆಗುವುದಿಲ್ಲ ಎನ್ನುವಂಥ ಭಾವನೆ ನಿಮ್ಮ ಮನಸ್ಸಿನಲ್ಲಿ ಬೇಡ. ಪ್ರಾಮುಖ್ಯವಾಗಿ ಮೊದಲು ನಿಮ್ಮ ಹೆಸರು ಪತ್ರಿಕೆಯಲ್ಲಿ ಬಂದು ನಿಮ್ಮಿಂದ ಈ ಕೆಲಸ ಆಯಿತು ಎಂದು ಹೇಳುತ್ತಿರತಕ್ಕಂಥದ್ದು, ಬಂದ ಮೇಲೆ ಇದು ಆಗಲಿಲ್ಲ ಎಂದರೆ ನಿಮಗೆ ಸ್ವಲ್ಪಮಟ್ಟಿಗೆ ಕಷ್ಟ ಆಗುತ್ತದೆ. ಇದು ನನಗೆ ಅರ್ಥವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಏನು ಕ್ರಮವನ್ನು ಕೈಗೊಂಡಿದ್ದೇವೆಂದು ಶ್ರೀಮಾನ್ ಬಸವಣ್ಣಪ್ಪನವರಿಂದಲೇ ನಾಳೆಯ ದಿವಸ ಇಲ್ಲಿ ಒಂದು ಹೇಳಿಕೆಯನ್ನು ಕೊಡಿಸಲಾಗುವುದು.

ಉಡುಪಿ ನಗರಕ್ಕೆ ನೀರನ್ನು ಒದಗಿಸಲು ಸ್ವರ್ಣಾ ನದಿಯ ಎರಡನೇ ಹಂತದ ಯೋಜನೆಯ ಪ್ರಾರಂಭ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಉಪಾಧ್ಯಕ್ಷರೆ, ಉಡುಪಿ ಪುರಸಭೆ ವ್ಯಾಪ್ತಿಯನ್ನು ನಗರಸಭೆ ವ್ಯಾಪ್ತಿಗೆ ವಿಸ್ತರಿಸಲ್ಪಟ್ಟು ಈಗಾಗಲೇ ಮುತ್ತೂರು, ಮಣಿಪಾಲ, ಬೈಲೂರು, ಮಲ್ಪೆ, ಹಿರ್ಗಾನ, ಮುಂತಾದವನ್ನು ಸೇರಿಸಲ್ಪಟ್ಟಿದೆಯೆಂದು ಗೊತ್ತಾಗಿದೆ. 24 ವರ್ಷಗಳ ಹಿಂದೆ ಉಡುಪಿ ನಗರಸಭೆಗೆ ಸ್ವರ್ಣಾ ನದಿಯ ಪ್ರಥಮ ಹಂತದ ಯೋಜನೆಯನ್ನು ಕಾರ್ಯಗತಗೊಳಿಸಿದ್ದು ಇದು 20 ವರ್ಷಗಳಿಗೆ ಮಾತ್ರ ಸೀಮಿತಗೊಂಡು ಈ ಯೋಜನೆಯನ್ನು ಮಾಡಲಾಗಿತ್ತು. ಆಗ ಉಡುಪಿ ಪುರಸಭೆಯಲ್ಲಿ 45 ಸಾವಿರ ಜನಸಂಖ್ಯೆ ಇದ್ದರೆ ಈಗ 1 ಲಕ್ಷದ 15 ಸಾವಿರ ಜನಸಂಖ್ಯೆಯುಳ್ಳ ನಗರಸಭೆಯಾಗಿ ಪರಿವರ್ತನೆ ಹೊಂದಿದೆ. ಅಂತರರಾಷ್ಟ್ರೀಯ ಮಟ್ಟದ ಮಣಿಪಾಲ ಹಾಗೂ ಭಾರತದೇಶದಲ್ಲಿಯೇ ಅತ್ಯಂತ ಹೆಚ್ಚು ಮೀನುಗಾರಿಕೆ ನಡೆಯುವ ಪ್ರದೇಶವಾದಂಥ ಮಲ್ಪೆ ಪ್ರದೇಶ ಈ ನಗರಸಭೆಗೆ ಸೇರಿದ್ದು, ಈಗಾಗಲೇ 25 ಕೋಟಿ ರೂಪಾಯಿಗಳ ಹೊಸ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ ಎಂದು ಕಳೆದ ಆಗಸ್ಟ್ 25 ರಂದು ಜಿಲ್ಲೆಯ ಉದ್ಘಾಟನಾ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸಮಕ್ಷಮದಲ್ಲಿ ಮಾನ್ಯ ನಗರಾಭಿವೃದ್ಧಿ ಸಚಿವರು ಒಂದು ಘೋಷಣೆ